ರಘುಪತಿರಾಯರು ಹೇಳಿ ಕೇಳಿ ಒಬ್ಬ ಹೆಸರಾಂತ ವೈದ್ಯ. ಜನಸೇವೆ ಮಾಡುವ ದೂರ ದೃಷ್ಟಿಯವರು ಅವರು ನಿರ್ಲಕ್ಷ್ಯದಿಂದ ಚಿಕಿತ್ಸೆ ನೀಡಲು ಸಾಧ್ಯವಿಲ್ಲ ಎಂದು ಸುನೀಲ್ ಒಮ್ಮೆ ಸರಿಯಾದ ಆಲೋಚನೆ ಮಾಡಿದ.

ರಘುಪತಿರಾಯರ ಪತ್ನಿ ಸುನಂದಾ ಮಗ ಆದಿಯನ್ನು ವಿಚಾರಿಸಿದಾಗ, 'ನನ್ನ ಗಂಡ ತುಂಬಾ ಒಳ್ಳೆಯವರು ಸಮಾಜಮುಖಿ ಮನೋಭಾವದವರು' ಎಂದಳು.

ಮಗ ಸಹ 'ಸರ್, ನನ್ನ ತಂದೆಗೂ ಈ ಕೊಲೆಗೂ ಯಾವುದೇ ಸಂಬಂಧವಿಲ್ಲ. ಹಾಗೇ ಸಂಬಂಧ ಇದ್ದಿದ್ದರೆ ಅವರು ಕೊಲೆ ಆಗಲು ಹೇಗೆ ತಾನೇ ಸಾಧ್ಯ? ರೋಗಿಗಳ ಸೇವೆಯೇ ಅವರ ಗುರಿಯಾಗಿತ್ತು. ಜನರ ಪ್ರೀತಿಯ ಡಾಕ್ಟರ್ ಇಂದು ಸಾವಿಗೀಡಾಗಿದ್ದಾರೆ. ಆಸ್ಪತ್ರೆಯ ಸಿಬ್ಬಂದಿ ವರ್ಗದವರನ್ನು ಕೇಳಿದಾಗ ಯಾವುದೇ ನಿರೀಕ್ಷಿತ ಮಾಹಿತಿ ದೊರೆಯಲಿಲ್ಲ. ರಾಯರ ಪತ್ನಿ ಮಗನಿಂದ ಯಾವುದೇ ನಿರೀಕ್ಷಿತ ಮಾಹಿತಿ ದೊರೆಯಲಿಲ್ಲ, ಏಕೆಂದರೆ ಅವರು ಅಜಾತಶತ್ರು ಎನಿಸಿಕೊಂಡವರು ಅವರಿಗೆ ಯಾರ ಶತ್ರುತ್ವವು ಇರಲಿಲ್ಲ'.

ನರ್ಸ್ ಲಕ್ಷ್ಮಮ್ಮನ ಸಾವಿನ ಕುರಿತು ವರದಿ ತಿಳಿಯೋಣ ಎಂದರೆ, ಲಕ್ಷ್ಮಮ್ಮನಿಗೆ ಗಂಡ ತೀರಿ ಹೋಗಿದ್ದರು. ಮಕ್ಕಳು ಇರಲಿಲ್ಲ ಜೊತೆಗೆ ರಘುಪತಿರಾಯರ ಆಸ್ಪತ್ರೆಯಲ್ಲಿ ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ರಾಯರ ಕೊಲೆಯಲ್ಲಿ ಲಕ್ಷ್ಮಮ್ಮನ ಕೈವಾಡ ಇರಲು ಸಾಧ್ಯವೇ ಇಲ್ಲ. ಅವರದ್ದು ಸಾರ್ಥಕ ಸೇವೆ. ರಾಯರನ್ನು ತಾಯಿಯಂತೆ ನೋಡಿಕೊಳ್ಳುತ್ತಿದ್ದರು. ಎಂದು ರಾಯರ ಪತ್ನಿ ಹಾಗೂ ಮಗನಿಂದ ತಿಳಿದು ಬಂದಿತ್ತು.

ಸುನಿಲ್‌ಗೆ ಎಲ್ಲರ ವಿಚಾರಣೆಯ ಬೆನ್ನಲ್ಲೇ ತಲೆಯಲ್ಲಿ ಒಂದು ವಿಚಾರ ಓಡಿತ್ತು. ಈ ವಿಷಯವನ್ನು ಹಾಗೂ ಕೊಲೆಯ ಜಾಲವನ್ನು ಭೇದಿಸಿದ ಸುನಿಲ್ ಅಂತಿಮವಾಗಿ ಅಪರಾಧಿ ಯಾರು ಎಂಬುದನ್ನು ಪತ್ತೆ ಮಾಡಿದ್ದ. ಹಿರಿಯ ಪೊಲೀಸ್ ಅಧಿಕಾರಿಗೆ ಸುನಿಲ್ ಸರ್, 'ಆರೋಪಿ ಸಿಕ್ಕಿದ್ದಾನೆ, ತಾವು ಅನುಮತಿ ಕೊಟ್ಟರೆ ಕೋರ್ಟ್‌ಗೆ ಹಾಜರುಪಡಿಸುತ್ತೇನೆ' ಎಂದ.

'ಆಗಲಿ ಸುನಿಲ್, ಕ್ಯಾರಿ ಆನ್ ಗುಡ್ ಜಾಬ್ ವೆಲ್ ಡನ್ ಮೈ ಬಾಯ್' ಎಂದು ಬೆನ್ನುತಟ್ಟಿದ್ದರು.

ಮರುದಿನ ಕೋರ್ಟ್‌ಗೆ ಹಾಜರಾದ ಸುನಿಲ್ ನ್ಯಾಯಾಧೀಶರ ಮುಂದೆ, ಡಾಕ್ಟರ್ ರಘುರಾಮರಾಯರು, ನರ್ಸ್ ಲಕ್ಷ್ಮಮ್ಮ ಹಾಗೂ ಎಂಬಿಬಿಎಸ್ ವಿದ್ಯಾರ್ಥಿನಿ ಸಹನಾಳ ತ್ರಿಕೋನ ಕೊಲೆಯ ಅಪರಾಧಿಯನ್ನು ತಮ್ಮ ಮುಂದೆ ಕರೆತಂದು ನಿಲ್ಲಿಸಲು ಅನುಮತಿ ಕೋರುತ್ತೇನೆ' ಎಂದ.

ಆಗಲಿ ಎಂದ ನ್ಯಾಯಾಧೀಶರು ಸೇರಿದಂತೆ ಎಲ್ಲರ ಮುಖದಲ್ಲಿ ಕುತೂಹಲ ಮನೆ ಮಾಡಿತ್ತು. ಅಪರಾಧಿ ಯಾರಿರಬಹುದೆಂಬ ಕೌತುಕಕ್ಕೆ ಅಪರಾಧಿಯೇ ಉತ್ತರ ನೀಡಬೇಕಿತ್ತು. ಕೋರ್ಟ್‌ಗೆ




ಸಾಬೀತು ಮಾಡಿದ ಕೊಲೆಯ ಅಪರಾಧಿ ಆದಿ. ಡಾಕ್ಟರ್ ರಘುರಾಮರಾಯರ ಮಗನೇ ಆಗಿದ್ದ. ಆದಿ ತನ್ನ ತಂದೆಯ ಜೀವಕ್ಕೆ ಅಂತ್ಯ ಹಾಡಿದ್ದ. ಎಲ್ಲರಿಗೂ ಒಂದು ಕ್ಷಣ ಆಶ್ಚರ್ಯ ಕೋರ್ಟ್ ಆವರಣದಲ್ಲಿ ನೆರೆದಿದ್ದವರೆಲ್ಲರೂ ಒಂದು ಕ್ಷಣ ಮೌನವಾದರು. ಭಯಾಭೀತರಾದರು. ಇವನಾ? ಅಪರಾಧಿ ಎಂಬ ಪ್ರಶ್ನಾರ್ಥಕ ಮನೋಭಾವ.

ಆದಿ, ನ್ಯಾಯಾಧೀಶರ ಮುಂದೆ ತಪ್ಪನ್ನು ಒಪ್ಪಿಕೊಂಡಿದ್ದ.

'ಹೌದು ಸ್ವಾಮಿ, ಈ ಮೂರು ಕೊಲೆಗಳನ್ನು ನಾನೇ ಮಾಡಿದ್ದು. ಖರ್ಚಿಗಾಗಿ, ಮೋಜಿಗಾಗಿ ಹೆಚ್ಚಿನ ಹಣ ಕೊಡದ ತಂದೆಯನ್ನು ಹಣ, ಆಸ್ತಿಯ ಆಸೆಗಾಗಿ ಹಾಗೂ ನರ್ಸ್ ಲಕ್ಷ್ಮಮ್ಮಳನ್ನು ಸಾಯಿಸುವಂತೆ ಕರೆ ಮಾಡಿ ಹೇಳಿದರೂ ಸಹ ನನ್ನ ಮಾತನ್ನು ನಿರ್ಲಕ್ಷಿಸಿದರೂ, ಹೆದರಲಿಲ್ಲ ಸಹನಾಳ ವಿಷಯ ಲಕ್ಷ್ಮಮ್ಮ ಹೇಗೆ ಹೇಳಿಯಾರು? ಹೇಳಿದರೆ ನನ್ನ ತಂದೆಯೇ ನನ್ನ ಮೇಲೆ ಕಂಪ್ಲೇಂಟ್ ಕೊಡಬಹುದು ಎಂಬ ಭಯ, ಹೀಗಾಗಿ ಟವಲ್‌ನಿಂದ ಬಿಗಿದು ಕೊಲೆ ಮಾಡಿದ್ದೆ. ಸಹನಾ ಓದುತ್ತಿದ್ದ ಕಾಲೇಜಿನಲ್ಲಿ ನಾನು ಸಹ ಓದುತ್ತಿದ್ದೆ. ಅವಳನ್ನು ನಾನು ಹುಚ್ಚನಂತೆ ಪ್ರೀತಿಸುತ್ತಿದ್ದೆ. ನಾನು ಮದುವೆ ಮಾಡಿಕೊಳ್ಳುವ ಹುಡುಗಿ ಇನ್ನೊಬ್ಬನನ್ನು ವರಿಸುವುದು ನನಗೆ ಇಷ್ಟವಿರಲಿಲ್ಲ. ನನಗೆ ಸಿಗದವಳು ಯಾರಿಗೂ ಸಿಗಬಾರದು ಎಂಬ ಹಟದಿಂದ ಆಕೆಯನ್ನು ಶೂಟ್ ಮಾಡಿ ಸಾಯಿಸಿದೆ, ಸಹನಾಳ ಕೊಲೆಯನ್ನು ಕಾಲೇಜಿನ ಮುಂದೆ ಹಾದು ಹೋಗುತ್ತಿರುವಾಗ ನರ್ಸ್ ಲಕ್ಷ್ಮಮ್ಮ ಪ್ರತ್ಯಕ್ಷವಾಗಿ ನೋಡಿದ್ದರು. ಕೊಲೆ ನೋಡಿದ್ದ ಲಕ್ಷ್ಮಮ್ಮ ರಾಯರಿಗೂ, ಹೇಳದೇ ಪೊಲೀಸ್ ಕಂಪ್ಲೇಂಟ್ ಕೊಡದೆ, ಆಸ್ಪತ್ರೆಗೂ ಹೋಗದೇ ಹೆದರಿ ಮನೆಯಲ್ಲೇ ಉಳಿದಿದ್ದರು. ಇದೇ ಸಮಯ ನೋಡಿ ನನ್ನ ಮೇಲೆ ಕಂಪ್ಲೇಂಟ್ ಕೊಡಬಹುದೆಂಬ ಭಯದಿಂದ ಅವರನ್ನು ಟವಲ್‌ನಿಂದ ಕೊಲೆ ಮಾಡಿದೆ. ಬಳಿಕ ಆ ಟವೆಲ್ ಸುಟ್ಟು ಹಾಕಿದೆ. ವಿದೇಶಗಳಿಂದ ತರಿಸಿದ ಗನ್ ಅನ್ನು ಅಜ್ಞಾತ ಸ್ಥಳದಲ್ಲಿ ಬಿಸಾಡಿದೆ' ಎಂದ ತಪ್ಪೊಪ್ಪಿಗೆಯಿಂದ.

ಸುನಿಲ್ ಆದಿ ಕೊಲೆಗೆ ಬಳಸಿದ ಗನ್ ಅನ್ನು ಕೋರ್ಟ್ ಮುಂದೆ ಸಾಬೀತು ಮಾಡಲಾಯಿತು. ಈ ಮೂರು ಕೊಲೆಗಳ ಆರೋಪಿ ಆದಿಗೆ ಕೋರ್ಟ್ ಜೀವಾವಧಿ ಶಿಕ್ಷೆ ನೀಡಿತು. ನ್ಯಾಯದೇವತೆ ನ್ಯಾಯದ ಪರವಾಗಿ ತಕ್ಕಡಿ ಹಿಡಿದಿದ್ದಳು. ಕೊಲೆ ರಹಸ್ಯ ಬಯಲು ಮಾಡಿದ ಸುನಿಲ್‌ಗೆ ಕೋರ್ಟ್ ಭೇಷ್ ಎಂದಿತು.

ಹಿರಿಯ ಪೊಲೀಸ್ ಅಧಿಕಾರಿ ಸುನಿಲ್ ಉದ್ದೇಶಿಸಿ 'ನೀವು ಇಷ್ಟೊಂದು ಕ್ಲಿಷ್ಟವಾದ ಸಮಸ್ಯೆಯನ್ನು ಹೇಗೆ ಭೇದಿಸಿದಿರಿ'.

'ಸಹನಾ ಗುಂಡೇಟು ತಿಂದು ಆಸ್ಪತ್ರೆಗೆ ಅಡ್ಮಿಟ್ ಆದಾಗ ನಾನು ಅದೇ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ತೆರಳಿದ್ದೆ. ಅಲ್ಲಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಆಕೆಯ ಸ್ನೇಹಿತರು, ವೈದ್ಯರು, ತಂದೆ ತಾಯಿ ಆಕೆಯ ಭಾವಿ ಪತಿ, ಮಾವ ಇವರ ತಪ್ಪಿಲ್ಲವೆಂಬತೆ ತೋರಿದರೂ ವಿಚಾರಣೆಯನ್ನು ಪ್ರೊಸೀಜರ್ ಪ್ರಕಾರ ಮಾಡಿದೆ. ಲಕ್ಷ್ಮಮ್ಮ ಈ ಘಟನೆ ನಡೆಯುವ ಸಮಯದಲ್ಲಿ ಗೈರಾಗಿದ್ದರು. ಎಂದಿಗೂ ಬೆದರಿಕೆ ಕರೆ ಬಾರದ ರಾಯರಿಗೆ ಸಹನಾ, ರಾಯರ ಆಸ್ಪತ್ರೆಗೆ ಸೇರಿ ಮರಣಿಸಿದ ತಕ್ಷಣವೇ ಲಕ್ಷ್ಮಮ್ಮನನ್ನು ಸಾಯಿಸುವಂತೆ ಕರೆ ಬಂತೆಂದರೆ, ಸಹನಾಳನ್ನು ಕೊಂದ ವ್ಯಕ್ತಿಯೇ ಡಾಕ್ಟರ್ ಅನ್ನು ಹಾಗೂ ನರ್ಸ ಅನ್ನು ಕೊಂದಿರಬಹುದು ಹಾಗೂ ಅಷ್ಟು ಬೇಗ ಕರೆ ಬಂದಿದೆ ಎಂದರೆ ರಾಯರ ಹತ್ತಿರದವರೆ ಇರಬಹುದು ಎಂಬ ಅನುಮಾನದ ಮೇಲೆ, ಮೊದಲು ಸಹನಾ ಓದುತ್ತಿದ್ದ ಕಾಲೇಜಿನ ಹಾಜರಿ ಪುಸ್ತಕ, ರಿಜಿಸ್ಟರ್ ಪುಸ್ತಕ ಹೀಗೆ ಎಲ್ಲ ರೆಕಾರ್ಡ್‌ಗಳನ್ನು ತೆಗೆದು ನೋಡಿದಾಗ ಆದಿಯ ಹೆಸರು ಕಾಣಿಸಿತು. ಅವನ ಸಂಪೂರ್ಣ ವಿಳಾಸದ ಆಳಕ್ಕೆ ಇಳಿದಾಗ ರಘುಪತಿರಾಯರ ಮಗನೆಂಬುದು ಖಚಿತವಾಗಿ ಈ ಕೊಲೆಗಳಿಗೆ ಹಾಗೂ ಆದಿಗೆ ಸಂಬಂಧವಿರಬಹುದೆಂದು ಅನುಮಾನ ಮೂಡಿ ಪೊಲೀಸರ ಶೈಲಿಯಲ್ಲಿ ವಿಚಾರಣೆ ಮಾಡಿದಾಗ ಸತ್ಯ ಬಾಯಿಬಿಟ್ಟ'.

ಕೇಸ್‌ನ ವಿಚಾರಣಾ ಹಾದಿ ತಿಳಿದು, ಹಿರಿಯ ಪೊಲೀಸ್ ಅಧಿಕಾರಿ ರಾಜಶೇಖರ್, 'ವಾಟ್ ಎ ಜೀನಿಯಸ್ ಯು ಆರ್ ವೆರಿ ಗುಡ್', ಆದರೆ ನನಗೆ ಒಂದು ಸಂದೇಹ– ನೀವು ಈ ಕೇಸ್‌ನಲ್ಲಿ ಯಾಕೆ ಇಷ್ಟೊಂದು ತಲೆಕೆಡಿಸಿಕೊಂಡಿರಿ' ಎಂದಾಗ,

ಸುನಿಲ್ 'ಸರ್, ನಾನು ತಾಯಿಯ ಗರ್ಭದ ಮೂಲಕ ಸುರಕ್ಷಿತವಾಗಿ ಹೊರ ಬರಲು ಕಾರಣ ಡಾಕ್ಟರ್ ರಘುಪತಿರಾಯರು ಹಾಗೂ ನರ್ಸ್ ಲಕ್ಷ್ಮಮ್ಮ. ಆದರೆ ಅವರು ಇಂದು ಇಲ್ಲ. ನನ್ನ ತಾಯಿ ಬಡತನ ಕಂಡವರು. ಅವರು ನನಗೆ ಹಾಗೂ ನನ್ನ ತಾಯಿಗೆ ಮಾಡಿದ ಸಹಾಯಕ್ಕೆ ಋಣ ತೀರಿಸಲು ಸಾಧ್ಯವಿಲ್ಲ. ಹೀಗಾಗಿ ಅವರ ಸಾವಿಗೆ ಕಾರಣರಾದವರನ್ನು ಕಂಡುಹಿಡಿದು ಅವರ ಆತ್ಮಕ್ಕೆ ಇಂದು ಶಾಂತಿ ನೀಡಿದ್ದೇನೆ ಎಂದುಕೊಳ್ಳುತ್ತೇನೆ. ಈ ಕೊಲೆಗೆ ಕಾರಣವಾದ ಸತ್ಯಾಸತ್ಯತೆ ಭೇದಿಸಿದೆ' ಎಂದು ಸುನಿಲ್ ಕಂಬನಿ ಮಿಡಿದಿದ್ದ.

ಪ್ರತಿಕ್ರಿಯಿಸಿ: feedback@sudha.co.in